



ಅರುಣ ಪಿ. ಭಟ್ಟ

## ವಾರಭವಿಷ್ಯ: 08.12.2022ದಿಂದ 14.12.2022ರವರೆಗೆ




ಹಣಕಾಸಿನ ಹರಿವು ಹೆಚ್ಚಿಸಿಕೊಳ್ಳಲು ಹೊಸ ಆಯ್ಕೆಗಳು ಗೋಚರವಾಗುತ್ತವೆ. ವೈಯಕ್ತಿಕ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆಗಳು ಕಾಣಿಸಿಕೊಳ್ಳುತ್ತವೆ. ಪ್ರತಿಸ್ಪರ್ಧಿಗಳ ವಿರುದ್ಧ ನಿಮ್ಮ ಕೈ ಮೇಲಾಗಲಿದೆ. ಮಕ್ಕಳ ಮದುವೆಗೆ ಸಂಬಂಧ ಹುಡುಕುತ್ತಿದ್ದಲ್ಲಿ ಸೂಕ್ತ ವಧು ವರ ಒದಗಿಬರುವ ಅವಕಾಶ ಹೆಚ್ಚಿದೆ. ರಹಸ್ಯವಾದ ಸಂಗತಿಯೊಂದು ತಿಳಿದುಬರಲಿದೆ. ಶುಭದಿನ 08. ಗಣಪತಿಗೆ ದೂರ್ವಾರ್ಚನೆ ಮಾಡಿರಿ.




ವೃತ್ತಿಪರರಿಗೆ ಉತ್ತಮವಾದ ಸಮಯ ಇದು. ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ಧತೆ ನಡೆಸುತ್ತಿರುವವರಿಗೆ ಯಶಸ್ಸು ದೊರೆಯಲಿದೆ. ಕ್ರಿಯಾತ್ಮಕ ಕ್ಷೇತ್ರಗಳಲ್ಲಿ ತೊಡಗಿರುವವರಿಗೆ ಪ್ರಗತಿ ಬಡ್ತಿ ದೊರೆಯುವ ಸಮಯ ಇದು. ಅಧಿಕಾರದಲ್ಲಿ ಇರುವವರು ನಿಮ್ಮ ಶ್ರಮಕ್ಕೆ ಮೆಚ್ಚುಗೆ ವ್ಯಕ್ತಪಡಿಸಲಿದ್ದಾರೆ. ಪೋಷಕರು ನಿಮ್ಮ ಪ್ರಗತಿಯಿಂದಾಗಿ ಸಂತೋಷಪಡಲಿದ್ದಾರೆ. ಶುಭದಿನ 09. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.




ಹೊಸದಾಗಿ ಉದ್ಯೋಗ ಹುಡುಕುತ್ತಿರುವವರಿಗೆ, ಉದ್ಯೋಗ ಬದಲಾವಣೆಗಾಗಿ ಪ್ರಯತ್ನಿಸುತ್ತಿರುವವರಿಗೆ ಶುಭ ಸುದ್ದಿ ಕೇಳುವ ಯೋಗ ಇದೆ. ಸೋದರ ಸೋದರಿಯರ ಜೊತೆಗೆ ಒತ್ತಡದ ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ. ಇನ್ನು ಈವರೆಗೆ ಗೊಂದಲ ಹುಟ್ಟುಹಾಕಿದ್ದ ವಿಚಾರಗಳಿಗೆ ಪರಿಹಾರ ದೊರೆಯಲಿದೆ. ಶುಭದಿನ 09. ಲಕ್ಷ್ಮೀನಾರಾಯಣ ಹೃದಯ ಪಾರಾಯಣ ಮಾಡಿರಿ.




ಕಾನೂನು ವ್ಯಾಜ್ಯಗಳಿದ್ದಲ್ಲಿ ಜಯ ಪಡೆಯುವ ಅವಕಾಶ ಇದೆ. ಪ್ರತಿಸ್ಪರ್ಧಿಗಳ ವಿರುದ್ಧ ನಿಮ್ಮ ಕೈ ಮೇಲಾಗಲಿದೆ. ಉದ್ಯೋಗ ಸ್ಥಳದಲ್ಲಿ ಬಹಳ ಮುಖ್ಯವಾದ ಜವಾಬ್ದಾರಿಯನ್ನು ನಿಮಗೆ ವಹಿಸಲಾಗುವುದು. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಿದ್ದೀರಿ. ನಿಮ್ಮ ಶ್ರಮ ಹಾಗೂ ದುಡಿಮೆಗೆ ಮೆಚ್ಚುಗೆ, ಮನ್ನಣೆ ದೊರೆಯಲಿದೆ. ವೈವಾಹಿಕ ಜೀವನ ಸಂತುಷ್ಟವಾಗಿರುತ್ತದೆ. ಶುಭದಿನ 11. ಕಾಲ ಭೈರವನ ಸೇವೆ ಮಾಡಿರಿ.




ವೈವಾಹಿಕ ಜೀವನವು ಸಂತೋಷದಾಯಕವಾಗಿ ಇರುತ್ತದೆ. ಆರೋಗ್ಯವು ಉತ್ತಮವಾಗಿರುತ್ತದೆ. ವಾರದ ಮಧ್ಯ ಭಾಗದಲ್ಲಿ ಮುಖ್ಯವಾದ ಯೋಜನೆಯ ಮೇಲುಸ್ತುವಾರಿ ಸಲುವಾಗಿ ದೂರ ಪ್ರಯಾಣ ಮಾಡಬೇಕಾಗುತ್ತದೆ. ವಿದೇಶದಲ್ಲೇ ನೆಲೆಯಾಗಬೇಕು ಎಂದು ಪ್ರಯತ್ನ ಮಾಡುತ್ತಿರುವವರಿಗೆ ವಿವಿಧ ಪ್ರಕ್ರಿಯೆಗಳು ಸರಾಗವಾಗಿ ಪೂರ್ಣಗೊಳ್ಳಲಿವೆ. ಶುಭದಿನ 13. ಈಶ್ವರನಿಗೆ ತಿಲಾರ್ಚನೆ ಮಾಡಿರಿ.




ಗೌರವ ಸನ್ಮಾನ ಪಡೆಯುವ ಅವಕಾಶ ಇದೆ. ವಿದೇಶ ವ್ಯವಹಾರ, ಹಣಕಾಸು ಹೂಡಿಕೆಯಲ್ಲಿ ನಿರೀಕ್ಷಿತ ಯಶಸ್ಸು ಪಡೆಯಲಿದ್ದೀರಿ. ಪ್ರತಿಸ್ಪರ್ಧಿಗಳ ವಿರುದ್ಧ ಮೇಲುಗೈ ಸಾಧಿಸಲಿದ್ದೀರಿ. ಆರೋಗ್ಯದಲ್ಲಿ ಸ್ವಲ್ಪ ಮಟ್ಟಿಗೆ ಏರುಪೇರಾಗಲಿದೆ. ಆಹಾರ ನೀರು ಸೇವನೆಯ ಬಗ್ಗೆ ಎಚ್ಚರ ಇರಲಿ. ವಾರದ ಮಧ್ಯ ಭಾಗದಲ್ಲಿ ಶುಭ ಸುದ್ದಿ ಕೇಳಲಿದ್ದೀರಿ. ಶುಭದಿನ 12. ಶ್ರೀ ವೆಂಕಟೇಶ್ವರ ಸ್ತೋತ್ರ ಪಠಿಸಿರಿ.




ವಿವಿಧ ಕ್ಷೇತ್ರಗಳಲ್ಲಿ ಪ್ರಗತಿ ಪಡೆಯಲಿದ್ದೀರಿ. ಸ್ಪರ್ಧಾತ್ಮಕ, ಕ್ರೀಡಾ ಕ್ಷೇತ್ರದಲ್ಲಿ ತೊಡಗಿಕೊಂಡವರಿಗೆ ಯಶಸ್ಸು ಪಡೆಯುವ ಯೋಗ ಇದೆ. ಆರೋಗ್ಯವು ಉತ್ತಮವಾಗಿ ಇರುವುದರಿಂದ ಉತ್ಸಾಹದಿಂದ ಕಾಣಿಸಿಕೊಳ್ಳಲಿದ್ದೀರಿ. ಸಂತಾನ ಅಪೇಕ್ಷಿತರಿಗೆ ಶುಭ ಸುದ್ದಿ ಪಡೆಯುವ ಯೋಗ ಇದೆ. ಆರ್ಥಿಕ ವ್ಯವಹಾರಗಳು ಲಾಭದಾಯಕವಾಗಲಿದೆ. ಶುಭದಿನ 10. ಲಿಂಗಾಷ್ಟಕ ಓದಿರಿ.




ಶಿಕ್ಷಣ ಕ್ಷೇತ್ರದಲ್ಲಿ ಇರುವವರಿಗೆ ಪ್ರಗತಿ ಕಾಣುವ ಸಮಯ ಇದು. ಗುತ್ತಿಗೆ ಆಧಾರದಲ್ಲಿ ಕಾರ್ಯ ನಿರ್ವಹಿಸುವವರಿಗೆ ಸೇವೆ ಕಾಯಂ ಆಗುವ ಶುಭ ಸುದ್ದಿ ದೊರೆಯಲಿದೆ. ಗೃಹ ನಿರ್ಮಾಣ ವಿಚಾರದಲ್ಲಿ ಪ್ರಗತಿ ಆಗಲಿದೆ. ಮಕ್ಕಳ ಕೆಲಸಗಳಿಂದ ಹೆಮ್ಮೆ ಮೂಡಲಿದೆ. ವಾರದ ಮಧ್ಯ ಭಾಗದಲ್ಲಿ ಹಣಕಾಸು ಹರಿವು ಹೆಚ್ಚಲಿದೆ. ಹಣ ಗಳಿಕೆಗೆ ಹಲವು ದಾರಿಗಳು ಗೋಚರಿಸಲಿವೆ. ಶುಭದಿನ 10. ಹನುಮಾನ್ ಚಾಲೀಸ್ ಓದಿರಿ.




ಮೆಚ್ಚುಗೆ, ಬಡ್ತಿ ದೊರೆಯುವ ಸಮಯ ಇದು. ರಾಜಕಾರಣ ಅಥವಾ ಸಮಾಜ ಸೇವಾ ಕ್ಷೇತ್ರದಲ್ಲಿ ಇರುವವರಿಗೆ ಮನ್ನಣೆ ಸಿಗಲಿದೆ. ಮನೆಯಲ್ಲಿ ಧಾರ್ಮಿಕ ಕಾರ್ಯಕ್ರಮಗಳನ್ನು ಆಯೋಜನೆ ಮಾಡುವ ಸಾಧ್ಯತೆ ಇದೆ. ಮನೆ ನವೀಕರಣ, ಗೃಹಾಲಂಕಾರದ ಕಡೆಗೆ ಗಮನ ನೀಡುತ್ತೀರಿ. ಆರೋಗ್ಯ ಸಮಸ್ಯೆಗಳಿಗೆ ಪರಿಹಾರ ದೊರೆಯುತ್ತದೆ. ಶುಭದಿನ 12. ನವದುರ್ಗಾ ಆರಾಧನೆ ಮಾಡಿರಿ.




ಪಿತ್ರಾರ್ಜಿತ ಆಸ್ತಿ ವ್ಯವಹಾರಗಳು ನೀವು ಅಂದುಕೊಂಡಂತೆ ನಡೆಯುತ್ತವೆ. ಕಾನೂನು ವ್ಯಾಜ್ಯಗಳಿದ್ದಲ್ಲಿ ಪರಿಹಾರ ದೊರೆಯಲಿದೆ. ರಾಜಕಾರಣ ಹಾಗೂ ನಾಯಕತ್ವ ಸ್ಥಾನದಲ್ಲಿ ಇರುವವರಿಗೆ ಇನ್ನಷ್ಟು ಪ್ರಾಮುಖ್ಯ ದೊರೆಯಲಿದೆ. ಅಧಿಕಾರದಲ್ಲಿ ಇರುವವರು ನಿಮ್ಮ ಕೆಲಸದ ಸಾಮರ್ಥ್ಯ ಮತ್ತು ಅನುಭವದ ಬಗ್ಗೆ ಮೆಚ್ಚುಗೆಯ ಮಾತುಗಳನ್ನು ಹೇಳಲಿದ್ದಾರೆ. ಬಡ್ತಿ ಸಾಧ್ಯತೆಗಳಿವೆ. ಶುಭದಿನ 12. ಚಂಡಿಪಾರಾಯಣ ಮಾಡಿರಿ.




ಮನೆಯಲ್ಲಿ ಪ್ರಶಾಂತವಾದ ವಾತಾವರಣ ಇರುತ್ತದೆ. ಕ್ರಿಯಾತ್ಮಕ ಕಾರ್ಯ ನಿರ್ವಹಿಸುತ್ತಿರುವವರಿಗೆ ತಮ್ಮ ಕೌಶಲ ಹೆಚ್ಚಿಸಿಕೊಳ್ಳಲು ಅವಕಾಶಗಳು ದೊರೆಯಲಿವೆ. ಪ್ರೀತಿಪಾತ್ರರ ಜತೆಗೆ ಮನರಂಜನೆ ಕಾರ್ಯಕ್ರಮಗಳಲ್ಲಿ ಭಾಗಿಯಾಗಲಿದ್ದೀರಿ. ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ಮಾಡಲಿದ್ದೀರಿ. ದೇವತಾರಾಧನೆಯಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇದೆ. ಶುಭದಿನ 09. ಸೌಂದರ್ಯ ಲಹರಿ ಪಠಿಸಿರಿ.




ಕಾನೂನು ವ್ಯಾಜ್ಯಗಳಿದ್ದಲ್ಲಿ ನಿಮ್ಮ ಪರವಾಗಿ ತೀರ್ಪು ಬರುವ ಸಾಧ್ಯತೆಗಳು ಹೆಚ್ಚಿವೆ. ಬಾಕಿ ಕೆಲಸಕ್ಕೆ ಸಂಬಂಧಿಸಿದ ನಿರ್ಧಾರ ಅನುಷ್ಠಾನ ಆಗಲಿದೆ. ಮೇಲಧಿಕಾರಿಗಳಿಂದ ನಿರೀಕ್ಷಿತ ಮಟ್ಟದ ಪ್ರೋತ್ಸಾಹ ಬೆಂಬಲ ದೊರೆಯಲಿದೆ. ಆರೋಗ್ಯದ ಬಗ್ಗೆ ನಿಯಮಿತವಾದ ಕಾಳಜಿ ತೆಗೆದುಕೊಳ್ಳುವುದು ಅತ್ಯಗತ್ಯ. ವಾರದ ಮಧ್ಯ ಭಾಗದಲ್ಲಿ ಶುಭ ಸುದ್ದಿಯನ್ನು ಕೇಳಲಿದ್ದೀರಿ. ಶುಭದಿನ 14. ವಿಷ್ಣು ಸಹಸ್ರನಾಮ ಪಠಿಸಿರಿ.